# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ.763-2013** **ಪಿ . ಡಬ್ಲುಃ 3**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶಂಕರ @ ಶಂಕರೇಗೌಡ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 04-03-2022. |

**ಪಾಟೀ ಸವಾಲುಃ ಶ್ರೀ ಎಂ.ಆರ್.ಎಸ್ ವಕೀಲರಿಂದಃ**

ವಾದಿಯ ದಾವಾ ಸ್ವತ್ತಿನ ದಕ್ಷಿಣಕ್ಕೆ 1 ನೇ ಪ್ರತಿವಾದಿ ಜಮೀನು ಇರುತ್ತದೆ. 1 ನೇ ಪ್ರತಿವಾದಿಯ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಇರುವುದನ್ನು ನಾನು ಈಗ್ಗೆ 38 ವರ್ಷಗಳಿಂದ ನೋಡುತ್ತಿದ್ದೇನೆ. ದಾವಾ ಸ್ವತ್ತಿನಲ್ಲಿ ನಾನು ಕೂಲಿ ಮಾಡುತ್ತಿದ್ದೇನೆ. ದಾವಾ ಸ್ವತ್ತಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಆದರೆ ಅದರ ವಿಸ್ತೀರ್ಣ ಗೊತ್ತು ಅದು 2 ಎಕರೆ ಇರುತ್ತದೆ. ದಾವಾ ಸ್ವತ್ತು ಗದ್ದೆ ಜಮೀನು ಆಗಿರುತ್ತದೆ. ದಾವಾ ಸ್ವತ್ತು ಹಾಗೂ ಪ್ರತಿವಾದಿಗಳ ಜಮೀನು ಬೇರೆ ಬೇರೆ ಕಡೆ ಇದೆ ಎಂದರೆ ಸರಿಯಲ್ಲ. ವಾದಿಯ ದಾವಾ ಸ್ವತ್ತು ಜಮೀನು ಹಾಗೂ ಪ್ರತಿವಾದಿಗಳ ಜಮೀನಿನ ಮಧ್ಯೆ ಸರ್ಕಾರಿ ಗೋಮಾಳ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಕಾಲುವೆ ಇದೆ, ಕಾಲುವೆ ನಂತರ ನನ್ನ ಜಮೀನು ಇರುತ್ತದೆ. ನನ್ನ ಜಮೀನಿನ ಆರ್.ಟಿ.ಸಿ ಯನ್ನು ನಾನು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿನ ಹತ್ತಿರ ನನ್ನ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ವಾದಿಗೆ ನಮ್ಮೂರಿನಲ್ಲಿ ಇರುವ ದಾವಾ ಸ್ವತ್ತನ್ನು ಬಿಟ್ಟು ಬೇರೆ ಯಾವ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ.

2. ಪ್ರತಿವಾದಿ ದಾವಾ ಸ್ವತ್ತು ನನ್ನದು ಎಂದು ಹೇಳಿದ್ದರಿಂದ ಅವರಿಬ್ಬರು ನಡುವೆ ಗಲಾಟೆ ಆಯಿತು. ಆ ರೀತಿ ಜಗಳ ನಡೆಯುವಾಗ ನಾನು ಹಾಗೂ ನನ್ನ ಅಣ್ಣ ಸಿದ್ದೇಗೌಡ ಇಬ್ಬರು ಇದ್ದೆವು. ಅದಲ್ಲದೆ ಇನ್ನೂ ಊರಿನ ಗ್ರಾಮಸ್ಥರು ಇದ್ದರು. ಜಗಳ ಸುಮಾರು ಅರ್ಧ ಗಂಟೆ ಕಾಲ ನಡೆಯಿತು. ವಾದಿಗೂ ಹಾಗೂ ಪ್ರತಿವಾದಿಗೂ ಯಾವುದೇ ಜಗಳ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ಆತನ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿ ದಾವಾ ಸ್ವತ್ತಿನಲ್ಲಿ ಕೂಲಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೊದಲು ವಾದಿ

ಜಮೀನಿನಲ್ಲಿ ಕೂಲಿ ಮಾಡುತ್ತಿದ್ದರು, ನಾನು 12 ವರ್ಷದವನಿರುವಾಗಲೇ ರೂ.50/- ಯಿಂದ ನಾನು ವಾದಿ ಜಮೀನಿನಲ್ಲಿ ಕೂಲಿಗೆ ಸೇರಿದೆ. ವಾದಿ ಹಾಗೂ ಪ್ರತಿವಾದಿ ಬೇರೆ ಬೇರೆ ರಾಜಕೀಯ ಪಕ್ಷಕ್ಕೆ ಸೇರಿದವರು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಮ್ಮ ಅಲ್ಲದೆ ಬೇರೆಯವರೂ ಕೂಡ ವಾದಿ ಗದ್ದೆಯಲ್ಲಿ ಕೆಲಸ ಮಾಡುತ್ತಾರೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**